ಇಳಿಬಿಟ್ಟು ವಿಶಿಷ್ಟ ಕೋನಗಳಲ್ಲಿ ಫಳಫಳನೆ ಫಳಿಸುತ್ತಿತ್ತು. ಇಬ್ಬರೂ ನಿಧಾನವಾಗಿ ಇಳಿದು ಹತ್ತಿರವಾಗುವಾಗ, ನನ್ನ ನೋಟ ನಿಚ್ಚಳಿಸಿತು. ಅವಳು ನಿಜಕ್ಕೂ ಕನ್ನೆಯೇ ಸರಿ. ಹೆಚ್ಚೆಂದರೆ ಇಪ್ಪತ್ತೆರಡು ಇಪ್ಪತ್ತಮೂರನೇ ವಯಸ್ಸಿದ್ದೀತು... ಲಕ್ಷಣವಾಗಿದ್ದಳು. ಅಜೀಬೇನೆಂದರೆ, ಅಲೇಕ್ಸ್ಯನಿಗೆ ಅವಳ ಡಬ್ಬಲು ವಯಸ್ಸು! ದುಪ್ಪಟ್ಟು ವ್ಯತ್ಯಾಸ!! ಅಷ್ಟೆ!!!

'ಡೋಂಟ್ ಟೆಲ್ ಮೀ, ಮೋದ್... ದಿಸ್ ಗಯ್ ಈಸ್ ಮ್ಯಾರಿಯಿಂಗ್ ದಿ ಕಿಡ್ ಬಿಸೈಡ್ ಹಿಮ್....' ಮಧುಕರಿ ನಾನಂದುಕೊಂಡಿದ್ದನ್ನೇ ಮಾತಾಗಿಸಿ ಆಡಿದ. ತಕ್ಷಣಕ್ಕೆ, ನನ್ನ ಎದೆಯೇಕೋ ಅಗತ್ಯಕ್ಕೂ ಹೆಚ್ಚು ಫಡಫಡಿಸಿತು. ದೇವರೇ... ಇವನು ಅವಳನ್ನು ವರಿಸುತ್ತಿಲ್ಲವಷ್ಟೆ?! ಆದರೆ ಕಣ್ಣೆದುರು ಪ್ರತ್ಯಕ್ಷ ಕಾಣಿಸಿದ್ದನ್ನು ಅಲ್ಲಗಳೆಯುವಂತಿರಲಿಲ್ಲ. ಅಥವಾ, ಮುಂಬಯಿಯ ಸಿನೆಮಾಗಳ ಕ್ಲೈಮ್ಯಾಕ್ಸಿನಲ್ಲಿ ಜರುಗುವ ಹಾಗೆ ಬೇರೇನಾದರೂ ಅಂತ್ಯವಿದ್ದೀತೆ... ಆ ತನಕ ಉಸಿರು ಬಿಗಿಹಿಡಿದು ಕಾಯುವುದೆ... ಏನೇನೆಲ್ಲ ಎಣಿಸಿದೆ ಗೊತ್ತೆ? ಇದು ಸತ್ಯವಿದ್ದ ಪಕ್ಷದಲ್ಲಿ, ನನ್ನ ಮಗಳು ಐಕ್ಯಾ ಇವನನ್ನು ಮೋಹಿಸಿದ್ದರಲ್ಲಿ ತಪ್ಪೇನಿದೆಯೆಂತಲೂ – ಒಮ್ಮೆಗೇ ಅನಿಸಿಬಂದು, ಸಣ್ಣಗೆ ನಡುಗಿದೆ. ಅಲ್ಲಗಳೆಯುತ್ತ ಒಡನೆಯೇ ಬೆವರಿದೆ.

ನಿಜದ ಸಂಗತಿಯೆಂದರೆ, ಕಣ್ಣಾರೆ ಕಂಡಿದ್ದಷ್ಟೂ ಸತ್ಯವೇ ಇದ್ದಿತು. ಯಾವುದೂ ಮೋಸವಿರಲಿಲ್ಲ. ಅಥವಾ, ಹಾಗೊಂದು ಮೋಸವೇನೂ ಜರುಗಲಿಲ್ಲ.

ನೋಡುನೋಡುತ್ತಲೇ ಇಬ್ಬರೂ ಬಾಳೆಕಂಬದ ಮಂಟಪದಲ್ಲಿ ಹಸೆಗೇರಿದರು. ಹಾರ ಬದಲಿಸಿಕೊಂಡರು. ಎಲ್ಲರೂ ಚಪ್ಪಾಳೆ ತಟ್ಟಿದರು. ಉಪ್ಪರಿಗೆಯಲ್ಲಿದ್ದ ಎರಡು ಹಿರೀಕ ದಂಪತಿಗಳು, ಇವನ ಮತ್ತು ಅವಳ ಅಪ್ಪಅಮ್ಮದಿರಿರಬೇಕು – ಮೇಲಿಂದಲೇ ಹೂಮಳೆಯೆರೆದರು. ಈ ನಡುವೆ ಅಲೇಕ್ಸ್ಯ ನಮ್ಮಿಬ್ಬರನ್ನು ಗಮನಿಸಿ, ಇದ್ದಲ್ಲಿಂದಲೇ ಕೈಬೀಸಿದ. ಮಧುಕರಿಯೂ ಕೈಸನ್ನೆಯಲ್ಲಿ, 'ಏನಿದೆಲ್ಲ?' ಎಂದು ಕೇಳಿದ. ಅಲೇಕ್ಸ್ಯನೂ ಅಷ್ಟೇ ಸಂಜ್ಞೆಗೈದು, 'ಇರಿರಿ... ನೀವಿದ್ದಲ್ಲಿಗೇ ಬಂದು ಮಾತನಾಡುತ್ತೇನೆ...' ಅನ್ನುವಂತೆ ಹೇಳಿ, ಕೈಜೋಡಿಸಿ ಮುಗಿದ. ಅಷ್ಟರಲ್ಲಿ, ಮಧುಕರಿಯ ಮೊಬೈಲಿನಲ್ಲೊಂದು ವಾಟ್ಸ್ಆ್ಯಪು ಬೀಪಿಸಿತು. ಐಕ್ಯಾಳ ಮೆಸೇಜು; ಮಧುಕರಿ ಅದನ್ನೋದಿಕೊಂಡು ಕೆಲಕಾಲ ಕಳೆದುಹೋದ.

ಅದೇ ಹೊತ್ತಿಗೆ ಸರಿಯಾಗಿ, ಜ್ಯಾಕಲಿನ್ ಮರಳಿ ನಮ್ಮೆದುರು ನಿಂತು, ಅಕ್ಷತೆಯ ಬಟ್ಟಲನ್ನು ಮುಂದೆ ಮಾಡಿದಳು. ನಾನು ಹೊಂಬಣ್ಣದ ಕೆಲವಕ್ಕಿ – ಕಾಳು ಹೆಕ್ಕಿಕೊಂಡು, ಮೊಬೈಲಿನಲ್ಲಿ ಮೆಸೇಜೋದಿಕೊಂಡಿದ್ದ ಮಧುಕರಿಗೆ ಇತ್ತ ಗಮನ ಹರಿಸೆನ್ನುವಂತೆ ಮೊಣಕೈಯಲ್ಲಿ ತಿವಿದೆ. ಅವನೂ ಬಟ್ಟಲಿಗೆ ಕೈಯಿಕ್ಕಿ, ಕಾಳು ಹೆಕ್ಕಿದ ಹಿಂದೆಯೇ ವಾಪಸು ಮೊಬೈಲು ಹೊಕ್ಕ. ನಾನಾದರೂ ಅಕ್ಕಿಯೆರಚುವ ಮುಹೂರ್ತವನ್ನೇ ಎದುರುನೋಡಿಕೊಂಡುಳಿದೆ. ಎಂತಹ ನಿರೀಕ್ಷೆ ಗೊತ್ತೆ?! ಈ ಅಲೆಕ್ಸೆಂಬ ಅಲೇಕ್ಸ್ಯ ಬ್ರಹ್ಮನು, ಯಾವುದೇ ಸುಳುಹು ಕೂಡ ಕೊಡದೆ ಹೀಗೆ ಅನಾಮತ್ತಾಗಿ ಮದುವೆ ಮಾಡಿಕೊಳ್ಳುವುದೆ? ಅದೂ ಮಗಳ ವಯಸ್ಸಿನ ಕನ್ನೆಯೊಡನೆ?! ಕಳ್ಳ... ನನಗಾದರೂ ಹೇಳಬಾರದಿತ್ತೆ... ತುಸುವೇ ಖಾಸಗಿಯಾಗಿ ಸಿಗುತ್ತಲೇ, ಈ ಇಡೀ ಪ್ರಕರಣವನ್ನು ಅವನ ಬಾಯಾರೆ ಕೇಳಬೇಕು; ಮತ್ತು ಅಷ್ಟೇ ಬಾಯಾರೆ, ನಮ್ಮ ಐಕ್ಯಾಳ ಮೋಹದ ಬಗ್ಗೆಯೂ ಆಡಬೇಕು... ಅಂದುಕೊಂಡು, ಅಕ್ಷತೆಯ ಸಮಯದ ಪ್ರತೀಕ್ಷೆಯಲ್ಲುಳಿದೆ. ಮಧುಕರಿ, ಇದ್ದಕ್ಕಿದ್ದಂತೆ ನನ್ನನ್ನು ಕರೆದೆಚ್ಚರಿಸಿ – ಇನ್ನಿಲ್ಲದ ಕಳವಳದಲ್ಲಿ ನನ್ನ ಕಣ್ಣೊಳಗೆ ನೋಡಿದ. ಅವನ ಕಂಗಳಲ್ಲಿ ಇಂತೊಂದು ದಿಗಿಲು ಕಂಡು ಬಲು ದಿವಸಗಳೇ ಆಗಿದ್ದವು! ಏನೋ ಕೇಡಿನ ಸುದ್ದಿಯೆಂತಲೇ ಬಗೆದೆ... ಏನಂತ, ಯಾಕಂತ – ನಾನು ಕೇಳುವ ಮೊದಲೇ, ಐಕ್ಯಾಳ